ಈ ಅಕ್ಕಚ್ಚಿಯಂತಹ ನೀರನ್ನು ನಿಮ್ಮ ವಿಶೇಷವಾದ ಸಾಂಬಾರ್ ಎಂದು ಕರೆಯುತ್ತೀರಾ?
Do you call this slops your special curry?
ಮುಂದಿನ ವಾರದಿಂದ ಕರುವಿನ **ಹಾಲು ನಿಲ್ಲಿಸೋಣ**, ನಾನು ಡೈರಿಗೆ ಹಾಲು ಸರಬರಾಜು ಮಾಡಬೇಕಿದೆ.
Let's **wean the** calf from next week. I have to supply milk to the diary.

(ಮುಂದುವರಿಯುವುದು)

ಕೆ.ವಿ.ರಾಜೇಂದ್ರ ನೇತೃತ್ವದಲ್ಲಿ 9 ದಿನಗಳು ವಿಶೇಷ ಪೂಜೆ ಮತ್ತು ಉತ್ಸವದೊಂದಿಗೆ ನವರಾತ್ರಿ ಆಚರಿಸಲಾಯಿತು. ಮಂಗಳವಾರ ವಿಜಯದಶಮಿಯ ಪ್ರಯುಕ್ತ ದುರ್ಗಾ ಪರಮೇಶ್ವರಿ ದೇವಿ ಮತ್ತು ಸ್ವಾಮಿ ವಿವೇಕಾನಂದ ಮೂರ್ತಿಯನ್ನು ತೆರೆದ ಸಾರೋಟಿನಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆ



# 'ಉಪಯುಕ್ತ ಕೀಟ ವೃದ್ಧಿಗೆ ತರಬೇತಿ ಅಗತ್ಯ'



**ವಿಕ ಸುದ್ದಿಲೋಕ** ಬೆಂಗಳೂರು

ಪ್ರಯೋಜನಕಾರಿ ಕೀಟಗಳ ವೃದ್ಧಿಗೆ ಸಂಬಂಧಿಸಿದಂತೆ ಕೃಷಿ ಮತ್ತು ತೋಟಗಾರಿಕಾ ಅಧಿಕಾರಿಗಳಿಗೆ ತರಬೇತಿ ಅಗತ್ಯವಿದೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರೀಸರ್ಚ್ (ಐಸಿಎಆರ್), ನ್ಯಾಷನಲ್ ಬ್ಯೂರೋ ಆಫ್ ಅಗ್ರಿಕಲ್ಚರಲ್ ಇನ್ಸೆಕ್ಟ್ ರಿಸೋರ್ಸಸ್ (ಎನ್‌ಬಿಎಐಆರ್) ಸಂಸ್ಥೆಯ ವತಿಯಿಂದ ಯಲಹಂಕದ ಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ ಜೈವಿಕ ನಿಯಂತ್ರಣ ಎಕ್ಸ್‌ಪೋ-2023 ಮತ್ತು 31 ನೇ ಸಂಸ್ಥಾಪನಾ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ಪ್ರಯೋಜನಕಾರಿ ಕೀಟಗಳ ವೃದ್ಧಿಯಿಂದ ರೈತರಿಗೆ ಅನುಕೂಲವಾಗುತ್ತದೆ. ನೈಸರ್ಗಿಕ ಮತ್ತು ಸಾವಯವ ಕೃಷಿಯಲ್ಲಿ ಜೈವಿಕ ನಿಯಂತ್ರಣ ಏಜೆಂಟ್‌ಗಳ ಪ್ರಾಮುಖ್ಯತೆಯೂ ಹೆಚ್ಚಾಗುತ್ತದೆ. ಕೀಟನಾಶಕ ಮುಕ್ತ ಆಹಾರದ ಉತ್ಪಾದನೆಯನ್ನು ಸುಲಭಗೊಳಿಸಬಹುದು,'' ಎಂದು ಅವರು ಪ್ರತಿಪಾದಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ.ಸುರೇಶ್ ಮಾತನಾಡಿ, ''ಸಂಸ್ಥೆಯ ಸೇವಾ ಸೌಲಭ್ಯಗಳು ರೈತರಿಗೆ ತಲುಪುವಂತೆ ಮಾಡಲು, ಎಲ್ಲಾ ಕೆವಿಕೆಗಳಲ್ಲಿ ಪ್ರಯೋಜನಕಾರಿ ಕೀಟಗಳ ಉತ್ಪಾದನೆಗೆ ಐಸಿಎಆರ್-ಎನ್‌ಬಿಎಐಆರ್‌ನಲ್ಲಿನ ತಂತ್ರಜ್ಞಾನ ಮತ್ತು ಸೌಲಭ್ಯಗಳನ್ನು ಬಳಸಿಕೊಳ್ಳಬೇಕು,'' ಎಂದು ತಿಳಿಸಿದರು.

ಪ್ರಗತಿಪರ ರೈತರನ್ನು ಸನ್ಮಾನಿಸಿ, ಕೃಷಿ ಸಾಮಗ್ರಿಗಳನ್ನು ವಿತರಿಸಲಾಯಿತು. ಎಕ್ಸ್‌ಪೋದಲ್ಲಿ ಸುಮಾರು 200 ರೈತರು ಪಾಲ್ಗೊಂಡಿದ್ದರು. 30 ಮಳಿಗೆಗಳಲ್ಲಿ ಕೃಷಿ ಉತ್ಪನ್ನ ಮತ್ತು ತಂತ್ರಜ್ಞಾನಗಳನ್ನು ಪ್ರದರ್ಶಿಸ ಲಾಯಿತು. ಕೇಂದ್ರ ಕೃಷಿ ಆಯುಕ್ತ ಡಾ.ಸಿಂಗ್, ಐಸಿಎಆರ್- ಎನ್‌ಬಿಎಐಆರ್ ನಿರ್ದೇಶಕ ಡಾ. ಎಸ್.ಎನ್.ಸುಶೀಲ್, ಡಾ. ಎಸ್. ಸಿ. ದುಬೆ, ಡಾ.ಜ್ಞಾನೇಶ್ವರ್ ವಾಘೌರೆ ಉಪಸ್ಥಿತರಿದ್ದರು.

**Vijay Karnataka**